ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

16 [illegible]

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ - ಉಪಸಭಾಪತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE 5/1/2021

# ಧರ್ಮೇಗೌಡರ ಡೆತ್‌ನೋಟ್ ವಿಧಿವಿಜ್ಞಾನ ಲ್ಯಾಬ್‌ಗೆ

## ಕೈಬರಹ ಖಾತ್ರಿಗೆ ಎಫ್‌ಎಸ್‌ಎಲ್‌ಗೆ ರವಾನೆ | ಉಪ ಸಭಾಪತಿ ಬರೆದಿಟ್ಟಿದ್ದು ಒಂದಲ್ಲ 2 ಪುಟ

• **ಆರ್.ತಾರಾನಾಥ್**

**ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು 5/1/21

ವಿಧಾನ ಪರಿಷತ್ ಉಪಸಭಾಪತಿ ಎಸ್.ಎಲ್.ಧರ್ಮೇಗೌಡ ಅವರು ಆತ್ಮಹತ್ಯೆಗೆ ಮೊದಲು ಬರೆದಿಟ್ಟ ಡೆತ್ ನೋಟ್ ಅನ್ನು ರೈಲ್ವೆ ಪೊಲೀಸ್ ಇಲಾಖೆ ತನಿಖಾಧಿಕಾರಿಗಳು ಬೆಂಗಳೂರಿನ ಇಂದಿರಾ ನಗರದಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್)ಕ್ಕೆ ಕಳಿಸಿಕೊಟ್ಟಿದ್ದಾರೆ. ಅವರ ಬಳಿ ಸಿಕ್ಕಿರುವ 2 ಪುಟಗಳ ಡೆತ್‌ನೋಟ್ ಅವರೇ ತಮ್ಮ ಕೈಯ್ಯಾರೆ ಬರೆದಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಈ ಕ್ರಮಕ್ಕೆಗೊಂಡಿದ್ದಾರೆ.

ಧರ್ಮೇಗೌಡ ಅವರು ಆತ್ಮಹತ್ಯೆಗೆ ಮೊದಲು ಡೆತ್ ನೋಟ್ ಬರೆದಿಟ್ಟಿದ್ದರು. ಅದರಲ್ಲಿ ವಿಧಾನ ಪರಿಷತ್ತಿನಲ್ಲಿ ಡಿ.15ರಂದು ನಡೆದ ಘಟನೆ ತಮ್ಮ ಮನಸ್ಸಿಗೆ ನೋವು ತಂದಿದೆ ಎಂದು ಉಲ್ಲೇಖಿಸಿರುವ ಜತೆಗೆ ಮನೆಯ ಆಸ್ತಿ ಹಂಚಿಕೆಯ ವಿಷಯ ಪ್ರಸ್ತಾಪಿಸಲಾಗಿದೆ ಎಂದು ಹೇಳಲಾಗಿತ್ತು. ಆದರೆ ಈಗ ಸಿಕ್ಕಿರುವ ಮಾಹಿತಿಯಂತೆ ಅವರು 2 ಪುಟಗಳಷ್ಟು ಡೆತ್‌ನೋಟ್ ಬರೆದು ತಮ್ಮ ಬಳಿ ಇಟ್ಟುಕೊಂಡಿದ್ದರು. ಇದರಲ್ಲಿ ಇತರೇ ವಿಷಯಗಳ ಬಗ್ಗೆಯೂ ಉಲ್ಲೇಖಿಸಲಾಗಿದೆ ಎಂದು ಹೇಳಲಾಗುತ್ತಿದೆ.



**ವಿಷದ ಅಂಶ ಪರೀಕ್ಷೆ:** ಆತ್ಮಹತ್ಯೆಗೆ ನಿಖರ ಕಾರಣ ತಿಳಿಯಲು ಧರ್ಮೇಗೌಡರ ಮೃತದೇಹವನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಇದು, ತನಿಖೆಯ ಒಂದು ಭಾಗವಾಗಿದ್ದು, ಧರ್ಮೇಗೌಡರು ಆತ್ಮಹತ್ಯೆಗೂ ಮುನ್ನ ವಿಷ ಸೇವನೆ ಮಾಡಿದ್ದರಾ ಎಂಬ ನಿಟ್ಟಿನಲ್ಲಿ ಮತ್ತೊಂದು ಪರೀಕ್ಷೆ ಇದೇ ಎಫ್‌ಎಸ್‌ಎಲ್ ಕೇಂದ್ರದಲ್ಲಿ ನಡೆಯುತ್ತಿದೆ.

**ಪರೀಕ್ಷೆಗೆ ಕಾರಣ:** ಗಣ್ಯವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಂಡರೆ ನಿಖರವಾದ ಕಾರಣವನ್ನು ಕಂಡುಹಿಡಿಯಲು ಮರಣೋತ್ತರದ ನಂತರ ವಿಭಾಗವಾರು ಪರೀಕ್ಷೆಯನ್ನು ನಡೆಸಲಾಗುತ್ತದೆ. ಎಫ್‌ಎಸ್‌ಎಲ್ ಕೇಂದ್ರದಲ್ಲಿ 20 ಪ್ರತ್ಯೇಕ ವಿಭಾಗಗಳಿವೆ. ಎಕ್ಸ್‌ಪ್ರೆಸ್ ಟ್ರೈನಿನ ವೇಗ ಗಂಟೆಗೆ 110 ಕಿ.ಮೀ. ಇರುತ್ತದೆ. ಸರಕು ಸಾಗಾಣಿಕೆಯ ರೈಲಿನ ವೇಗ ನೇರ ಮಾರ್ಗದಲ್ಲಿ ಗಂಟೆಗೆ 75 ಕಿ.ಮೀ. ಇರುತ್ತದೆ. ಚಲಿಸುತ್ತಿರುವ ರೈಲಿಗೆ ಅಡ್ಡಲಾಗಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಎಷ್ಟೇ ಗಟ್ಟಿ ಮನಸ್ಸು ಮಾಡಿಕೊಂಡು ಹಳಿಯ ಬಳಿ ಬಂದು ನಿಂತವರು ವೇಗವಾಗಿ ಆರ್ಭಟಿಸಿ ಬರುವ ರೈಲನ್ನು ನೋಡಿ ಭಯಗೊಂಡು, ಹಿಂದೇಟು ಹಾಕುವ ಸಾಧ್ಯತೆಯೇ ಹೆಚ್ಚಿರುತ್ತದೆ. ಧರ್ಮೇಗೌಡ ಅವರು ಮನಸ್ಸು ಗಟ್ಟಿ ಮಾಡಲು ಯಾವುದಾದರೂ ವಿಷ ತೆಗೆದುಕೊಂಡಿದ್ದರಾ ಎಂಬ ಬಗ್ಗೆ ಪರೀಕ್ಷೆ ನಡೆಸಿ ವರದಿ ನೀಡುವಂತೆ ಎಫ್‌ಎಸ್‌ಎಲ್‌ಗೆ ಕೇಳಿಕೊಂಡಿದೆ. ಇದಕ್ಕೆ ಕಾರಣ, ಅವರು ರೈಲಿನ ಹಳಿಯ ಮೇಲೆ ಅಡ್ಡಲಾಗಿ ಮಲಗಿ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಹೆಚ್ಚಿದೆ ಎಂಬುದು.